ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 9/2/2021

# ಜಾತಿ ಸಮಾವೇಶದಲ್ಲಿ ಸಚಿವರೇಕೆ ಭಾಗಿ?

## ಮನವಿ ಸ್ವೀಕರಿಸಬೇಕಾದವರೇ ಮನವಿ ಕೊಟ್ಟರೆ ಹೇಗೆ?: ಆಯನೂರು ಕಿಡಿ

• **ಕನ್ನಡಪ್ರಭ ವಾರ್ತೆ** ವಿಧಾನ ಪರಿಷತ್

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕೆಂದು ಆಗ್ರಹಿಸಿ ಭಾನುವಾರ ನಡೆದ ಕುರುಬ ಸಮಾವೇಶದಲ್ಲಿ ಸಚಿವ ಕೆ.ಎಸ್. ಈಶ್ವರಪ್ಪ ಸೇರಿದಂತೆ ಅನೇಕ ಸಚಿವರು ಭಾಗಿಯಾಗಿರುವುದಕ್ಕೆ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದರು.



ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವದ ಮೇಲೆ ಮಾತನಾಡಿದ ಅವರು, ರಾಜ್ಯಪಾಲರು ಸಂವಿಧಾನದತ್ತವಾಗಿ ಕಾರ್ಯಾಂಗದ ಮುಖ್ಯಸ್ಥರಾಗಿರುತ್ತಾರೆ. ಕೇವಲ ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಮಾತ್ರ ಸೀಮಿತರಾಗಿಲ್ಲ, ಸರ್ಕಾರ ಸರಿ ದಾರಿಯಲ್ಲಿ ನಡೆಯುವಂತೆ ಸಲಹೆ, ಸೂಚನೆ ಕೊಡಬೇಕು ಎಂದು ಅಭಿಪ್ರಾಯಪಟ್ಟರು.

ವಿವಿಧ ಸಮುದಾಯಗಳು, ಸಂಘಟನೆಗಳು ಮೀಸಲಾತಿ ನೀಡುವಂತೆ, ತಮ್ಮ ಬೇಡಿಕೆ ಈಡೇರಿಸುವಂತೆ ಸಮಾವೇಶ ನಡೆಸುವುದು ಸಹಜ. ಅದು ಅವರ ಹಕ್ಕು ಸಹ. ಸಮುದಾಯಗಳ ಸಮಾವೇಶ ಎಲ್ಲ ಸರ್ಕಾರದ ಅವಧಿಯಲ್ಲೂ ನಡೆದುಕೊಂಡು ಬಂದಿವೆ. ಆದರೆ ಇಂತಹ ಸಮಾವೇಶದಲ್ಲಿ ಸಚಿವರೇ ಭಾಗಿಯಾಗುವುದು ಎಷ್ಟರ ಮಟ್ಟಿಗೆ ಸರಿ? ಸಚಿವರಾದವರು ಸರ್ಕಾರದ ಪರವಾಗಿ ಸಮಾವೇಶಕ್ಕೆ ಹೋಗಿ ಅವರ ಸಮಸ್ಯೆ, ಮನವಿ ಸ್ವೀಕರಿಸಿ ನಿಮ್ಮ ಜೊತೆ ನಾವಿದ್ದೇವೆ ಎಂದು ಹೇಳುವ ಕೆಲಸ ಮಾಡಬೇಕೇ ಹೊರತು ಪರಿಹಾರ ನೀಡಬೇಕಾದವರೆ ಮನವಿ ಕೊಟ್ಟರೆ ಹೇಗೆ? ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ಯಾವುದೇ ಜಾತಿ ಪರವಾಗಿರದೆ, ರಾಗ-ದ್ವೇಷ ಇಲ್ಲದೆ ಕಾರ್ಯ ನಿರ್ವಹಿಸುವುದಾಗಿ ಹೇಳಿದ ನಂತರ ಈ ರೀತಿ ಸಚಿವರೇ ಜಾತಿ ಸಮಾವೇಶದಲ್ಲಿ ಭಾಗಿಯಾದರೆ ಅದು ಸಂವಿಧಾನ ವಿರೋಧಿ ಅಲ್ಲವೇ ಎಂದು ಪ್ರಶ್ನಿಸಿದರು. ಇಂತಹ ಸಂದರ್ಭದಲ್ಲಿ ಕಾರ್ಯಾಂಗದ ಮುಖ್ಯಸ್ಥರಾಗಿರುವ ರಾಜ್ಯಪಾಲರು ಸಚಿವರ ನಡವಳಿಕೆ ಸರಿಯಲ್ಲ ಎಂದು ಹೇಳಬೇಕಾಗುತ್ತದೆ ಎಂದು ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಶಾಸಕರಿಗೆ ನೀಡುತ್ತಿದ್ದ ವೇತನದಲ್ಲಿ ಶೇ.30ರಷ್ಟು ಕಡಿತ ಮಾಡಲಾಯಿತು. ಆದರೆ ಲಕ್ಷಾಂತರ ರು. ವೇತನ ತೆಗೆದುಕೊಳ್ಳುವ ಅಧಿಕಾರಿಗಳ ವೇತನ ಮಾತ್ರ ಕಡಿತ ಮಾಡಲಿಲ್ಲ. ಇಂತಹ ಸಂದರ್ಭದಲ್ಲೂ ರಾಜ್ಯಪಾಲರು ಅಧಿಕಾರಿಗಳ ವೇತನ ಕಡಿತ ಮಾಡುವಂತೆ ಸರ್ಕಾರಕ್ಕೆ ಸೂಚನೆ ನೀಡಬೇಕಿತ್ತು. ರಾಜ್ಯಪಾಲರು ಕೇವಲ ದಂತ ಗೋಪುರದಲ್ಲಿ ಇರಬಾರದು. ಸಂವಿಧಾನದತ್ತವಾಗಿ ಆಯಾ ರಾಜ್ಯದ ಕಾರ್ಯಾಂಗದ ಮುಖ್ಯಸ್ಥರಾಗಿಯೂ ಸಲಹೆ, ಸೂಚನೆ ನೀಡಬೇಕಿತ್ತು ಎಂದು ನುಡಿದರು.